## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 436/2025 **ಪಿ ಡಬ್ಲ್ಯೂ: 1**

**ದಿ:12.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: 1 ಎದುರುದಾರ ಪರ ವಕೀಲರಾದ ಶ್ರೀ ಕೆ ಬಿ ಎಸರವರಿಂದ.**

ನನ್ನ ಗಂಡನ ಸ್ವಂತ ಊರು ರಟ್ಟಿಹಳ್ಳಿ ಇದ್ದು ಈಗ ನಾವು ಹಳೇ ಹುಬ್ಬಳ್ಳಿಯಲ್ಲಿ ಇದ್ದೇವೆ. ನನ್ನ ಪ್ರಮಾಣ ಪತ್ರದಲ್ಲಿ ಹಾಕಿರುವಂತಹ ಮಾಹಿತಿಗಳು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ ನನ್ನ ವಾಸ ಹಳೇ ಕೆಇಬಿ ಆಫೀಸ ಎದುರಿಗೆ ಸಂಶಿ ಕುಂದಗೋಳ ತಾಲೂಕ ಎಂಬುವುದಾಗಿ ಬರೆಸಿರುತ್ತೇನೆಂದರೆ ಸರಿ. ಪೋಲೀಸರಿಗೆ ನಾನು ಯಾವ ಗಾಡಿಯಿಂದ ಹೇಗೆ ಅಪಘಾತವಾಗಿದೆ ಎಂದು ಮಾಹಿತಿ ಕೊಟ್ಟಿಲ್ಲವೆಂದರೆ ಸಾಕ್ಷಿ ಅಲ್ಲಿ ಇದ್ದವರೆ ಮಾಹಿತಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಹೈವೆಗೆ ಗಾಡಿಗಳು ಬರಬೇಕೆಂದರೆ ಕುಂದಗೋಳ ಕ್ರಾಸ ಮುಖಾಂತರವೆ ಹುಬ್ಬಳ್ಳಿಗೆ ಬರಬೇಕೆಂದರೆ ಸರಿ. ಸದರಿ ಹೈವೆನಲ್ಲಿ ನಡುವೆ ಜಾಗ ಬಿಟ್ಟು ಅಲ್ಲಿ ಹೂವಿನ ಗಿಡಗಳನ್ನು ಹಾಕಿರುತ್ತಾರೆಂದರೆ ಸರಿ. ಆ ರಸ್ತೆಯಲ್ಲಿ ಆ ಕಡೆಯವರು ಓಡಾಡಬೇಕೆಂದರೆ ರಸ್ತೆಯ ಡಿವಾಯ್ಡರನ್ನು ಹೊಡೆದುಕೊಂಡು ಬಂದು ಹೋಗುವುದು ಮಾಡುತ್ತಾರೆಂದರೆ ಸರಿ. ಸದರಿ ರಸ್ತೆಯಲ್ಲಿ ಯಾವುದೇ ವಾಹನ ಬರಬಾರದೆಂದು ತಡೆ ನಿಯಮ ಇದ್ದರು ಕೂಡಾ ಅವರಾಗಿಯೆ ಬಂದು ಬೇರೆ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತಾರೆಂದರೆ ಸಾಕ್ಷಿ ಅವರೆ ಹಿಂದಿನಿಂದ ಬಂದು ಡಿಕ್ಕಿ ಹೊಡೆದಿರುತ್ತಾರೆ ಎನ್ನುತ್ತಾರೆ.

ಕೆಎಂಸಿಯಲ್ಲಿ ಸರ್ಕಾರಿ ಆಸ್ಪತ್ರೆಯಾಗಿದ್ದರಿಂದ ಎಲ್ಲವು ಉಚಿತವಾಗಿರುತ್ತದೆ ಎಂದರೆ ಸರಿ. ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ರೀತಿಯ ಖರ್ಚು ಬರದೆ ಇದ್ದರು ನಾನು ಮೆಡಿಕಲ್ ಖರ್ಚು ಹಾಗೂ ಇತರೇ ಸುಮಾರು 1 ಲಕ್ಷ ಎಂದು ಬರೆಸಿರುತ್ತೇನೆಂದರೆ ಸಾಕ್ಷಿ



ಸರಿ ಅಲ್ಲ ಎನ್ನುತ್ತಾರೆ. ಅದೇ ರೀತಿ ನನ್ನ ಯಜಮಾನರು ಮೇಣಸಿನಕಾಯಿ ವ್ಯಾಪಾರ ಮಾಡುತ್ತಿದ್ದರು ಮತ್ತು ತಿಂಗಳಿಗೆ 25 ಸಾವಿರ ಗಳಿಸುತ್ತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಕಿಲ್ಲವೆಂದರೆ ಸರಿ. ಅನದಿಕೃತವಾಗಿ ನನ್ನ ಯಜಮಾನರು ಆ ರಸ್ತೆಯಲ್ಲಿ ಬಂದಿದ್ದರಿಂದ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನಾನು ಕೇಳಿರುವಂತಹ ಪರಿಹಾರವನ್ನು ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ. ಸದರಿ ಪ್ರಮಾಣ

ಪತ್ರದಲ್ಲಿ ಬರೆದಿರುವ ವಿಷಯಗಳು ಯಾವತ್ತಿಗೂ ನನಗೆ ತಿಳಿಯದೆ ಇದ್ದರು ಕೂಡಾ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ 2 ನೇ ಎದುರುದಾರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ